ಮಾಡಿದ್ದಾರೆ. ಸುಮಾರು ೪೦-೫೦ ಜನಕ್ಕೆ ನಾವು ಇದನ್ನು ಒಪ್ಪಿಕೊಳ್ಳುವುದಾದರೆ ಇಡೀ ರಾಜ್ಯ ದ್ಯಂತ ಇರತಕ್ಕ ಗ್ಯಾಂಗ್‌ಮನ್ ಕೂಲಿಗಳಿಗೂ ಇದು ಆನ್ವಯವಾದರೆ ಫೈನಾನ್ಷಿಯಲ್ ಇಂಪ್ಲಿಕೇಷನ್ ಹೆಚ್ಚಾಗುತ್ತದೆ. ಆ ಕಾರಣದಿಂದ ಇದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೈಕೋರ್ಟಿಗೆ ರಿಟ್ ಹೋಗಿದೆ. ಅಲ್ಲಿ ತೀರ್ಮಾನವಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರು ಅಲ್ಲಿ ಸಹ ತೀರ್ಮಾನವಾಗಿ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕುತ್ತಿದ್ದೇವೆಂದು ಹೇಳಿದರು. ಈ ಮಾಹಿತಿ ಅವರಿಗೆ ಹೇಗೆ ಸಿಕ್ಕಿತೋ ನನಗಂತೂ ಗೊತ್ತಿಲ್ಲ. ನನಗೆ ಗೊತ್ತಿರತಕ್ಕ ಮಾಹಿತಿ ಪ್ರಕಾರವಾಗಿ ಹೈಕೋರ್ಟಿನಲ್ಲಿ ಕೇಸ್ ಹಾಕಿ ತೀರ್ಮಾನ ಮಾಡಿದ್ದೇವೆ ಅಷ್ಟೆ.

ಕಾರಂಜಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವ ಕುರಿತು

೪೮೭ (೧೧೪೬) ಶ್ರೀ ನಾರಾಯಣರಾವ್‌ಮನಳ್ಳಿ (ಬೀದರ್).—ಮಾನ್ಯ ಲೋಕೋಪಯೋಗಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಾರಂಜಿ ನದಿಗೆ ಅಡ್ಡಲಾಗಿ ಬಿದರೆ ಚಿಂಚೋಳಿ-ಮನಹಳ್ಳಿ ಮಾರ್ಗದಲ್ಲಿ ಬಂಗೂರ್‌ಹಳ್ಳಿ ಹತ್ತಿರ ಸೇತುವೆ ನಿರ್ಮಿಸಲು ಸರ್ಕಾರದ ಹತ್ತಿರ ಯೋಜನೆ ಇದೆಯೇ ?

ಆ) ಹಾಗಿದ್ದಲ್ಲಿ ಕೆಲಸ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಕೆಲಸವು ೮೪-೮೫ರ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸೇರಿದೆ.

ಆ) ಕೆಲಸದ ಅಂದಾಜಿಗೆ ಮಂಜೂರಾತಿಯನ್ನು ಕೊಟ್ಟಮೇಲೆ ಕೆಲಸವನ್ನು ಪ್ರಾರಂಭಿಸ ಲಾಗುವುದು.

ಕಾರಂಜಿ ರಿವರ್ ಮೇಲೆ ಸೇತುವೆಯನ್ನು ಕಟ್ಟಬೇಕು ಎನ್ನುವ ಬಗ್ಗೆ ಹಿಂದಿನ ಮುಖ್ಯ ಮಂತ್ರಿ ಗಳವರು ಅಲ್ಲಿಗೆ ಭೆಟಿ ಕೊಟ್ಟಿದ್ದಾಗ ಸೂಚನೆಕೊಟ್ಟು ಬಂದಿದ್ದರು. ಆದರೆ ಆವರ ಬಗ್ಗೆ ೧೯೮೨-೮೩ರ ಬಜೆಟ್‌ನಲ್ಲಿ ಅವರು ಹಣವನ್ನು ಇಟ್ಟಿರಲಿಲ್ಲ. ಆ ಕಾರಣದಿಂದ ಆ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಆದುದರಿಂದ ನಾವು ಈಗ ೧೯೮೪-೮೫ರಲ್ಲಿ ೧೨ ಲಕ್ಷರೂಪಾಯಿಗಳ ಅಂದಾಜು ಮಾಡಿ, ಈ ಸೇತುವೆಯನ್ನು ಕಟ್ಟುವುದಕ್ಕೆ ೧ ಸಾವಿರ ರೂಪಾಯಿಗಳನ್ನು ಟೋಕನ್ ಗ್ರಾಂಟನ್ನು ಸೇರಿಸಿದ್ದೇವೆ. ನಮಗೆ ಸಂಪನ್ಮೂಲಗಳ ಕೊರತೆ ಇದೆಯೆಂದು ಮೊದಲೇ ಹೇಳಿದ್ದೇನೆ. ನಮಗೆ ಹೆಚ್ಚಿಗೆ ಹಣ ಸಿಕ್ಕುವುದಾದರೆ ಈ ಕೆಲಸವನ್ನು ತಕ್ಷಣವೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಮಾನ್ಯ ಉಪಾಧ್ಯಕ್ಷರೆ, ಬಜೆಟ್‌ನಲ್ಲಿ ಕಾಣಿಸಿದ ಪ್ರಕಾರ ಇದಕ್ಕೆ ೧೨ ಲಕ್ಷ ಇಟ್ಟಿದ್ದಾರೆ. ಆದರೆ ಎಸ್ಟಿಮೇಟ್ ೧೬ ಲಕ್ಷ ಆಗಿದೆ. ಇದರ ಸಲುವಾಗಿ ಏನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಎಸ್ಟಿಮೇಟ್ ಹೆಚ್ಚಾಗಿದೆಯೆಂದು ಹೇಳುತ್ತಾ ಇದ್ದಾರೆ. ಅವರು ಏನು ಕೊಟ್ಟಿದ್ದಾರೆ ಅದರ ಮೇಲೆಯೇ ನಾವು ಸೇರಿಸಿದ್ದೇವೆ ಅದು ಏನೇ ಇರಲಿ, ನಮಗೆ ಸ್ವಲ್ಪ ಹಣ ಸಿಕ್ಕಿದರೆ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಹಿಪ್ಪರಗಿ ಯೋಜನೆ

೪೮೮ (೧೨೫೨) ಶ್ರೀ ಎಂ.ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಿಪ್ಪರಗಿ ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ಮತ್ತು ಅಂದಾಜು ವೆಚ್ಚವೆಷ್ಟು ?

ಆ) ಮೇಲ್ಕಂಡ ಯೋಜನೆಗೆ ಈವರೆಗೆ ಮಾಡಿದ ವೆಚ್ಚವೆಷ್ಟು? ಹಾಗೂ ಅದರ ರೂಪುರೇಷೆ ಗಳೇನು ?